ಕರ್ನಾಟಕ ಸರಕಾರ


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಜಿಲ್ಲಾ ಪಂಚಾಯತ ಧಾರವಾಡ

# ಮಾತು ಕತೆ

ನಮ್ಮ ನಡೆ ಗ್ರಾಮದ ಕಡೆ...





ಸಂಪುಟ : 01 ಸಂಚಿಕೆ 03 : ಮಾರ್ಚ 2023

## ಕೂಬಿಹಾಳ ಗ್ರಾಮ ಪಂಚಾಯತಿ

ಜಿಲ್ಲೆ : ಧಾರವಾಡ


## ಕೂಬಿಹಾಳದ ಮಾತುಕತೆ...



◆ 1975 ರಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರಪಂಚದಾದ್ಯಂತ ಮಾರ್ಚ 8 ರಂದು ಆಚರಿಸಲಾಗುತ್ತಿದೆ. ಈ ವರ್ಷದ ಆಚರಣೆಯ ಘೋಷ ವಾಕ್ಯವು "DigitALL: ಲಿಂಗ ಸಮಾನತೆಗಾಗಿ ನಾವಿನ್ಯತೆ ಮತ್ತು ತಂತ್ರಜ್ಞಾನ". ಇದು, ಒಟ್ಟು ಜನಸಂಖ್ಯೆಯ ಸುಮಾರು ಅರ್ಧದಷ್ಟಿರುವ ಮಹಿಳೆಯರ ಕೊಡುಗೆಗಳನ್ನು ಸಮಾಜವು ಕೃತಜ್ಞತೆಯಿಂದ ನೆನೆಯುವ ವಿಶೇಷ ದಿನವಾಗಿದೆ. ಲಿಂಗ ಸಮಾನತೆ, ಮಹಿಳಾ ಸಬಲೀಕರಣ, ಮಹಿಳೆಯರ ಹಕ್ಕುಗಳು ಈ ಸಂದರ್ಭದ ಚರ್ಚಾ ವಿಷಯಗಳಾಗಿದ್ದು, ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳು ದೊರೆಯುವದನ್ನು ಖಚಿತಪಡಿಸಿಕೊಳ್ಳಬೇಕಾಗಿದೆ.

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 3 ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ 50 ರಷ್ಟು ಮೀಸಲಾತಿ ಮಹಿಳೆಯರಿಗೆ ಇದ್ದು, ಆಯ್ಕೆಗೊಂಡವರು ಗ್ರಾಮಗಳ ಅಭಿವೃದ್ಧಿಯ ನೇತಾರರಾಗಿ ಗಮನಾರ್ಹವಾದ ಸಾಧನೆಗಳನ್ನು ಮಾಡುತ್ತಿದ್ದಾರೆ.
- ಸಂಜೀವಿನಿ ಯೋಜನೆಯಡಿಯಲ್ಲಿ ಮಹಿಳಾ ಸ್ವ ಸಹಾಯ ಸಂಘಗಳ ಮೂಲಕ ಕಿರು ಉದ್ದಿಮೆಗಳನ್ನು ಸ್ಥಾಪಿಸಿಕೊಂಡು, ಉತ್ಪಾದನೆಗಳಲ್ಲಿ ತೊಡಗಿದ್ದು, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಸಾಧಿಸುತ್ತಿದ್ದಾರೆ.
- ಗ್ರಾಮಗಳ ತ್ಯಾಜ್ಯ ನಿರ್ವಹಣೆಯನ್ನು ನಮ್ಮ ಸ್ವ ಸಹಾಯ ಸಂಘಗಳ ಮಹಿಳೆಯರು ನಿರ್ವಹಿಸುತ್ತಿದ್ದು, ಸ್ವಚ್ಛ ವಾಹಿನಿಗಳನ್ನು ಮಹಿಳೆಯರೇ ನಡೆಸುತ್ತಿರುವದು ಶ್ಲಾಘನೀಯವಾಗಿದೆ.
- ನರೇಗಾ ಅಡಿ ಸ್ಥಳೀಯವಾಗಿ ಉದ್ಯೋಗ ನೀಡಿ, ಪುರುಷ ಮತ್ತು ಮಹಿಳೆಯರಿಗೆ ಸಮಾನ ಕೂಲಿ ಸಂದಾಯದಿಂದ ಆರ್ಥಿಕ ಸ್ವಾವಲಂಬನೆ ಸಾಧ್ಯವಾಗಿದೆ.
- ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಮಹತ್ವದ ಸಾಧನೆ ಮಾಡುತ್ತಿದ್ದು, ಅಂಥ ಸಾಧಕರನ್ನು ಗುರುತಿಸಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಸನ್ಮಾನಿಸಿ, ಪ್ರೋತ್ಸಾಹಿಸುವ ಕಾರ್ಯವನ್ನು ಮುಂದುವರೆಸಬೇಕಾಗಿದೆ.
- ಮಹಿಳೆ ಅಧ್ಯಕ್ಷರಾಗಿರುವ ಕೂಬಿಹಾಳ ಗ್ರಾಮ ಪಂಚಾಯತಿಯ ವಿಷಯಗಳನ್ನೊಳಗೊಂಡ ಮಾತುಕತೆ ಮಾಸ ಪತ್ರಿಕೆಯ ಮೂಲಕ ಸರ್ವರಿಗೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

**ಡಾ: ಸುರೇಶ ಇಟ್ನಾಳ** ಐಎಎಸ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ಧಾರವಾಡ.

## ಕೂಬಿಹಾಳ ಹಾಗೂ ಹಂಚಿನಾಳ-ನಮ್ಮ ಎರಡು ಕಣ್ಣುಗಳು...



- ನಮ್ಮ ಗ್ರಾಮ ಪಂಚಾಯತಿಯು ಎರಡು ಗ್ರಾಮಗಳನ್ನು ಹೊಂದಿದ್ದು, ಅವುಗಳು: ಕೂಬಿಹಾಳ ಮತ್ತು ಹಂಚಿನಾಳ.
- ತಾಲೂಕು ಕೇಂದ್ರವಾದ ಕುಂದಗೋಳ ಪಟ್ಟಣದಿಂದ 8 ಕಿಮೀ ದೂರದಲ್ಲಿರುವ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವಾದ ಕೂಬಿಹಾಳ ಗ್ರಾಮವು ಫಲವತ್ತಾದ ಕಪ್ಪು ಯರಿ ಮಣ್ಣಿನಿಂದ ಕೂಡಿದ್ದು, ಇಲ್ಲಿ ಮೆಣಸಿನಕಾಯಿ, ಹತ್ತಿ ಮುಂತಾದ ಬೆಳೆಗಳನ್ನು ಬೆಳೆಯುವ ದೊಡ್ಡ ಹಿಡುವಳಿ ಹೊಂದಿದ ಕುಬೇರರ ಹಳ್ಳಿ ಕಾಲಾಂತರದಲ್ಲಿ ಕೂಬಿಹಾಳ ಅಂತಾ ಬದಲಾಗಿದೆ.
- ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನದಿಂದ 2 ಕಿಮೀ ದೂರದಲ್ಲಿರುವ ಹಂಚಿನಾಳವು ಒಂದು ಸಣ್ಣ ಗ್ರಾಮವಾಗಿದ್ದು, ಶ್ರೀಮಂತಿಕೆಯ ಪ್ರತೀಕವಾದ ಹಂಚಿನ ಮನೆಗಳನ್ನು ಹೊಂದಿದ ಹಳ್ಳಿ ಕಾಲಾಂತರದಲ್ಲಿ ಹಂಚಿನಾಳ ಅಂತಾ ಬದಲಾಗಿದೆ.
- ನಮ್ಮ ಗ್ರಾಮ ಪಂಚಾಯತಿಯನ್ನು ಮಾದರಿ ಗ್ರಾಮ ಪಂಚಾಯತಿಯನ್ನಾಗಿ ಮಾಡಿ, ನಗರ ಪ್ರದೇಶದ ಎಲ್ಲಾ ಸೌಲಭ್ಯಗಳು ನಮ್ಮ ಗ್ರಾಮಗಳ ನಿವಾಸಿಗಳಿಗೆ ಲಭ್ಯವಾಗುವಂತೆ ಮಾಡುವದು ನಮ್ಮ ಧ್ಯೇಯವಾಗಿದೆ.

**ಶ್ರೀಮತಿ ಶಕೀನಾಬಿ ಖಾದರಸಾಬ ನದಾಫ**
ಅಧ್ಯಕ್ಷರು, ಗ್ರಾಮ ಪಂಚಾಯತ್ ಕೂಬಿಹಾಳ

## ಮಹಿಳೆಯೂ ಮತ್ತು ಸ್ವಚ್ಛತೆಯೂ...



- ಕೂಬಿಹಾಳ ಗ್ರಾಮ ಪಂಚಾಯತಿಯಲ್ಲಿ ಸ್ವಚ್ಛ ಭಾರತ ಮಿಷನ್(ಗ್ರಾ) ಅಡಿಯಲ್ಲಿ 2019 ರಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸಿದೆ.
- ಹಸಿ ಮತ್ತು ಒಣ ಕಸ ಸಂಗ್ರಹಕ್ಕಾಗಿ ಮನೆ ಮನೆಗೆ ಕಸದ ಬುಟ್ಟಿಗಳನ್ನು ವಿತರಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕೂಡ ಕಸದ ತೊಟ್ಟಿ ಇಡಲಾಗಿದೆ.
- ಕಸ ಸಂಗ್ರಹಕ್ಕಾಗಿ ಗ್ರಾಮ ಪಂಚಾಯತಿಯು 1 ಮೂರು ಚಕ್ರದ ವಾಹನವನ್ನೂ ಮತ್ತು 1 ನಾಲ್ಕು ಚಕ್ರದ ವಾಹನವನ್ನೂ ಹೊಂದಿದೆ.
- ಕಸ ಸಂಗ್ರಹ ಮತ್ತು ವಿಂಗಡಣೆಯ ಕಾರ್ಯನಿರ್ವಹಣೆಗಾಗಿ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟದೊಂದಿಗೆ ಗ್ರಾಮ ಪಂಚಾಯತಿಯು ಒಡಂಬಡಿಕೆ ಮಾಡಿಕೊಂಡಿದೆ.
- ಸರಕಾರದಿಂದ ಸ್ವ ಸಹಾಯ ಸಂಘದ ಮಹಿಳೆ : ಶ್ರೀಮತಿ ರತ್ನಾ ತಳವಾರ ಇವರಿಗೆ ಲಘು ವಾಹನ ಚಾಲನಾ ತರಬೇತಿಯನ್ನು ನೀಡಿದ್ದು, ಅವರು ಸ್ವಚ್ಛ ವಾಹಿನಿಯನ್ನು ಚಲಾಯಿಸುವದು ನಮ್ಮ ಗ್ರಾಮದ ಹಮ್ಮೆ.

**ಶ್ರೀ ನಾಗನಗೌಡ ಬಾಪೂಗೌಡ ಸಾತ್ಮಾರ**
ಉಪಾಧ್ಯಕ್ಷರು, ಗ್ರಾಮ ಪಂಚಾಯತ ಕೂಬಿಹಾಳ

## ಮಲ ತ್ಯಾಜ್ಯ ಸಂಸ್ಕರಣಾ ಘಟಕ...



- ಗ್ರಾಮ ಪಂಚಾಯತಿಯಲ್ಲಿರುವ ಕುಟುಂಬಗಳು ಸ್ವಂತ ಸಂಪನ್ಮೂಲ ಅಥವಾ ಸರಕಾರದ ಪ್ರೋತ್ಸಾಹ ಧನವನ್ನು ಉಪಯೋಗಿಸಿಕೊಂಡು ಶೌಚಾಲಯಗಳನ್ನು ನಿರ್ಮಿಸಿಕೊಂಡಿವೆ. ಬಹಳಷ್ಟು ಶೌಚಾಲಯಗಳು ಏಕ ಗುಂಡಿಯನ್ನು ಮತ್ತು ಕೆಲವು ಕುಟುಂಬಗಳು ಮಾತ್ರ ಅವಳಿ ಗುಂಡಿಗಳನ್ನು ಹೊಂದಿವೆ. ಹಲವು ಆಸಕ್ತ ಕುಟುಂಬಗಳು ಸೆಪ್ಟಿಕ್ ಟ್ಯಾಂಕ್ ಹೊಂದಿದ ಶೌಚಾಲಯಗಳನ್ನು ಹೊಂದಿವೆ ಜನರು ಶೌಚಾಲಯಗಳನ್ನು ನಿತ್ಯ ಉಪಯೋಗಿಸುವದನ್ನು ರೂಢಿಸಿಕೊಂಡಿದ್ದಾರೆ.
- ಶೌಚಾಲಯದ ಗುಂಡಿಗಳು ಮತ್ತು ಸೆಪ್ಟಿಕ್ ಟ್ಯಾಂಕ್‌ಗಳು ತುಂಬಿದಾಗ ಸಕ್ಕಿಂಗ್ ಮಷಿನ್ ಉಳ್ಳ ವಾಹನಗಳಿಂದ ಮಲ ತ್ಯಾಜ್ಯವನ್ನು ಸೆಳೆದುಕೊಂಡು ಮಲ ತ್ಯಾಜ್ಯವನ್ನು ಜನ ವಸತಿಯಿಂದ ದೂರದ ಬಯಲು ಪ್ರದೇಶದಲ್ಲೋ, ಹಳ್ಳದಲ್ಲೋ ವಿಲೇವಾರಿ ಮಾಡಲಾಗುತ್ತಿದ್ದು ಇದು ಪರಿಸರಕ್ಕೆ ಮಾರಕವಾಗಿದೆ. ಇದನ್ನು ತಪ್ಪಿಸಲು ಮಲ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ಮಿಸುವದು ಅವಶ್ಯವಾಗಿದೆ.
- ಕೂಬಿಹಾಳ ಗ್ರಾಮ ಪಂಚಾಯತಿಯು ತಮ್ಮ ಗ್ರಾಮದಲ್ಲಿ ಮಲ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಿಸಲು ಮುಂದೆ ಬಂತು. ಗ್ರಾಮ ಪಂಚಾಯತಿಯ ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕರ್ನಾಟಕ ರಾಜ್ಯದ ಮಾದರಿ ಘಟಕವಾದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಗೆ ಭೇಟಿ ನೀಡಿ ಅಧ್ಯಯನ ಮಾಡಿ ಬಂದರು ಮತ್ತು ಗ್ರಾಮ ಪಂಚಾಯತಿಯ ಮಾಲಿಕತ್ವದ ಜಾಗೆಯಲ್ಲಿ 9 KLW ಸಾಮರ್ಥ್ಯದ ಸಂಸ್ಕರಣಾ ಘಟಕವನ್ನು ರೂ 45,97,876/- ಅಂದಾಜು ವೆಚ್ಚದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮೂಲಕ ಸಿಡಿಡಿ ಸಂಸ್ಥೆಯ ತಾಂತ್ರಿಕ ಬೆಂಬಲದೊಂದಿಗೆ ನಿರ್ಮಿಸುತ್ತಿದ್ದು, ಪ್ರಸ್ತುತ ಮುಕ್ತಾಯದ ಹಂತದಲ್ಲಿದೆ. ಇದು 10 ಕಿ.ಮೀ ಸುತ್ತಳತೆಯಲ್ಲಿ ಬರುವ 6 ಗ್ರಾಮ ಪಂಚಾಯತಿಗಳ 32,105 ಜನ ಸಂಖ್ಯೆಯನ್ನು ಹೊಂದಿದ 6,361 ಕುಟುಂಬಗಳಿಗೆ ತನ್ನ ಸೇವೆಯನ್ನು ಒದಗಿಸಲಿದೆ.
- ಗ್ರಾಮ ಪಂಚಾಯತಿಯು ಈಗಾಗಲೇ ಸಕ್ಕಿಂಗ್ ಮಷೀನ್ ಮತ್ತು ವಾಹನವನ್ನು ಹೊಂದಿ, ಸ್ವಚ್ಛತೆಯ ಕೈಂಕರ್ಯಕ್ಕೆ ಸಿದ್ಧವಾಗಿದೆ.

**ಶ್ರೀ ಬಿ ಎಸ್ ಮೂಗನೂರಮಠ**
ಯೋಜನಾ ನಿರ್ದೇಶಕರು
ಜಿಲ್ಲಾ ಪಂಚಾಯತ್ ಧಾರವಾಡ

## ನರೇಗಾದಲ್ಲಿ: ಬೂದು ನೀರಿನ ಸಂಸ್ಕರಣೆ



- ಸರಕಾರದ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಒಂದಾದ ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನೆಯು ಪ್ರತಿ ಹಳ್ಳಿಯು ಸಂಪೂರ್ಣ ಸ್ವಚ್ಛ ಪರಿಸರವನ್ನು ಹೊಂದುವ ಉದ್ದೇಶ ಹೊಂದಿದೆ. ಇದರ ಒಂದು ಭಾಗವಾಗಿ ಮನೆ ಮನೆಗಳಿಂದ ಹೊರ ಬರುವ ಬೂದು ನೀರನ್ನು ಸಮರ್ಪಕ ನಿರ್ವಹಣೆ ಮಾಡುವ ಉದ್ದೇಶದಿಂದ ಬೂದು ನೀರು ನಿರ್ವಹಣೆ ಕಾಮಗಾರಿಗಳನ್ನು ವೆಟ್ ಲ್ಯಾಂಡ್ ಮಾದರಿ ಸಮುದಾಯ ಮಟ್ಟದ ಕಾಮಗಾರಿಗಳು ಮತ್ತು ಜಾಗೆ ಲಭ್ಯವಿರುವ ಮನೆಗಳ ಹಿತ್ತಲುಗಳಲ್ಲಿ ಇಂಗುಗುಂಡಿ ನಿರ್ಮಾಣ ಕಾಮಗಾರಿಗಳು ಚಾಲ್ತಿಯಲ್ಲಿವೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
- ಇದರಿಂದಾಗಿ, ಗ್ರಾಮದ ನೈರ್ಮಲ್ಯ ಅನುಕೂಲವಾಗುವ ಜೊತೆಗೆ ಅಂತರ್ಜಲದ ಮಟ್ಟ ಏರುತ್ತಿದೆಯಲ್ಲದೇ, ಸಂಸ್ಕರಿತ ನೀರನ್ನು ಕೃಷಿಗೂ ಬಳಸಲು ಯೋಗ್ಯವಾಗಿದೆ.

**ಶ್ರೀ ಅಜಯ್ ಎನ್**
ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ್, ಕುಂದಗೋಳ



## ದುಡಿಯುವ ಕೈ ಗಳಿಗೆ ಕೆಲಸ...



- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2022-23 ನೇ ಸಾಲಿನಲ್ಲಿ ಕೂಬಿಹಾಳ ಗ್ರಾಮ ಪಂಚಾಯತಗೆ 16,079 ಮಾನವದಿನಗಳ ಗುರಿ ನಿಗದಿಪಡಿಸಿದ್ದು, ಅದರಂತೆ 20,367 ಮಾನವದಿನಗಳ ಸಾಧನೆ (ಶೇ 125%) ಮಾಡಿದೆ.
- ಗ್ರಾಮದ ಬಡಕೂಲಿ ಕಾರ್ಮಿಕರಿಗೆ ವಲಸೆ ಹೋಗದಂತೆ ಉದ್ಯೋಗ ನೀಡಲಾಗಿದೆ. ಸ್ಮಶಾನ ಅಭಿವೃದ್ಧಿ, ಶಾಲೆಗಳ ಭೋಜನಾಲಯ ಕಟ್ಟಡ, ಅಂಗನವಾಡಿ ಕಟ್ಟಡ, ತರಬೇತಿ ಕಟ್ಟಡ, ಕೆರೆ ಅಭಿವೃದ್ಧಿ, ಬದು ನಿರ್ಮಾಣ, ದನದ ಕೊಟ್ಟಿಗೆ, ಇಂಗುಗುಂಡಿ, ಎರೆಹುಳು ತೊಟ್ಟಿ, ಆಟದ ಮೈದಾನ ಹಾಗೂ ಗ್ರಾಮೀಣ ಮೂಲಭೂತ (ರಸ್ತೆ/ಚರಂಡಿ/ಸಿಡಿ) ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಿಂದ ಬಡಕೂಲಿ ಕಾರ್ಮಿಕರಿಗೆ ಸ್ಥಳೀಯವಾಗಿ ಕೂಲಿ ಕೆಲಸ ಸಿಕ್ಕಂತಾಗಿದೆ.
- ನರೇಗಾ ಯೋಜನೆಯಡಿಯಲ್ಲಿ ಮಹಿಳಾ ಭಾಗವಹಿಸುವಿಕೆಯು ಹಿಂದಿನ ಎರಡು ವರ್ಷಗಳ ಸಾಲಿನಲ್ಲಿ ಅಂದರೆ 2020-21 ರಲ್ಲಿ ಶೇ. 30.37% ಮತ್ತು 2021-22 ರಲ್ಲಿ ಶೇ 28.79% ಆಗಿರುತ್ತದೆ. ಮಾನ್ಯ ಮೇಲಾಧಿಕಾರಿಗಳ ನಿರ್ದೇಶನದಂತೆ ಈ ಆರ್ಥಿಕ ವರ್ಷದಲ್ಲಿ ಮಹಿಳಾ ಗ್ರಾಮ ಸಭೆ, ಜಿಪಿಎಲ್‌ಎಫ್ ಒಕ್ಕೂಟಗಳ ಸಭೆಯಲ್ಲಿ ಮಹಿಳಾ ಭಾಗವಹಿಸುವಿಕೆ ಕುರಿತು ಸಾಕಷ್ಟು ಪ್ರಚಾರ ಮಾಡಲಾಗಿದ್ದರಿಂದ ಈ ಆರ್ಥಿಕ ವರ್ಷದಲ್ಲಿ 40% ರಷ್ಟು ಉತ್ತಮ ಸಾಧನೆ ಮಾಡಲಾಗಿದೆ.
- ಬರುವ ದಿನಗಳಲ್ಲಿ ಇದನ್ನು ಶೇ.50ರಷ್ಟು ಗುರಿ ಸಾಧಿಸಲಾಗುವುದು. ಪ್ರಸ್ತುತ ಕೂಲಿಕಾರರು ಗ್ರಾಮ ಪಂಚಾಯತ ಮೇಲೆ ನಂಬಿಕೆ ಮತ್ತು ಸ್ಥಳೀಯ ಉದ್ಯೋಗದಾತ ಎಂದು ನಂಬಿಕೊಂಡಿದ್ದಾರೆ

**ಶ್ರೀ ಗಿರೀಶ ಎಮ್ ಅಮರಗೊಂಡ**
ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ, ಕೂಬಿಹಾಳ

## ಸ್ವಚ್ಛ ಶನಿವಾರ...ಶುಭ್ರ ಶನಿವಾರ...





- ಗ್ರಾಮೀಣ ಸಮುದಾಯದಲ್ಲಿ ಸುಸ್ಥಿರ ನೈರ್ಮಲ್ಯ ಮತ್ತು ಶುಚಿತ್ವ ಅಭ್ಯಾಸಗಳನ್ನು ರೂಢಿಸಲು ಘನ ಸರಕಾರದ ನಿರ್ದೇಶನದಂತೆ ಪ್ರತಿ ಮಾಹೆಯ ಪ್ರಥಮ ಶನಿವಾರವನ್ನು ಸ್ವಚ್ಛ ಶನಿವಾರ ಎಂದು "ನಮ್ಮ ಗ್ರಾಮ ಸ್ವಚ್ಛ ಗ್ರಾಮದ ಕಡೆ" ಎಂಬ ಘೋಷವಾಕ್ಯದೊಂದಿಗೆ ಗ್ರಾಮದ ಪ್ರಮುಖ ಸ್ಥಳಗಳನ್ನು ಸ್ವಚ್ಛತೆಗೊಳಿಸುವುದು ಹಾಗೂ ವೈಯಕ್ತಿಯ ಸ್ವಚ್ಛತೆಗೆ ಆದ್ಯತೆ ಕೊಡುವುದು ಮುಖ್ಯ ಉದ್ದೇಶವಾಗಿದೆ.
- ಸಾರ್ವಜನಿಕರು ಸ್ವಚ್ಛತೆಯ ಕುರಿತು ಒಳ್ಳೆಯ ಅಭ್ಯಾಸ ಹೆಚ್ಚಿಸುವ ನಿಟ್ಟಿನಲ್ಲಿ ಕೂಬಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬಸ್ ನಿಲ್ದಾಣದ ನೆಲಹಾಸನ್ನು ನೀರಿನಿಂದ ತೊಳೆಯಲಾಯಿತು, ದುರಸ್ತಿ ಮಾಡಲಾಯಿತು, ಅಂಗವಿಕಲ ಸ್ನೇಹಿಯಾಗಿ ಪರಿವರ್ತಿಸಲಾಯಿತು ಹಾಗೂ ಬಣ್ಣ ಸುಣ್ಣಗಳಿಂದ ಅಲಂಕರಿಸಲಾಯಿತು.
- ಈ ಒಂದು ವಿಶೇಷ ಸ್ವಚ್ಛತಾ ಆಂದೋಲನದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಜನಪ್ರತಿನಿಧಿಗಳು, ಗ್ರಾಮಸ್ಥರು, ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು, ಅಂಗನವಾಡಿ ಆಶಾ ಕಾರ್ಯಕರ್ತೆಯರು, ಶಾಲಾ ಮಕ್ಕಳು ಭಾಗವಹಿಸುವುದರ ಮೂಲಕ ಸ್ವಚ್ಛತೆಯ ಬದಲಾವಣೆಯಲ್ಲಿ ತಮ್ಮದೇ ಕೊಡುಗೆ ನೀಡಿದರು

**ಹಣಮಂತಗೌಡ ಮಾ ಪಾಟೀಲ**
ಮಾನವ ಸಂಪನ್ಮೂಲ ಅಭಿವೃದ್ಧಿ ಸಮಾಲೋಚಕರು, ಜಿಲ್ಲಾ ಪಂಚಾಯತ, ಧಾರವಾಡ

## ಗ್ರಾಮೀಣ ಕ್ರೀಡಾ ಕೂಟಗಳು...



- ಗ್ರಾಮ ಪಂಚಾಯತಿಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಆಟದ ಮೈದಾನಗಳನ್ನು ನಿರ್ಮಿಸಲಾಗಿದೆ.
- ಕೂಬಿಹಾಳ ಗ್ರಾಮದಲ್ಲಿ 74 ನೇ ಗಣರಾಜ್ಯೋತ್ಸವದ ನಿಮಿತ್ಯ ದಿನಾಂಕ: 26 ನೇ ಜನೇವರಿ 2023 ರಂದು ಗ್ರಾಮೀಣ ಕ್ರೀಡಾ ಕೂಟವನ್ನು ಆಯೋಜಿಸಲಾಗಿತ್ತು.
- ಗ್ರಾಮೀಣ ಕ್ರೀಡಾ ಕೂಟದ ಜೊತೆಗೆ ಮತ್ತು ಗಣರಾಜ್ಯೋತ್ಸವ ನಿಮಿತ್ಯ ಯುವಕರು ಮತ್ತು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.
- ಗ್ರಾಮೀಣ ಪ್ರದೇಶದ ಯುವಕರು ಮತ್ತು ಮಕ್ಕಳಿಗೆ ಈ ಕ್ರೀಡಾಕೂಟಗಳು ವಿಶೇಷವಾಗಿ ಅವರ ಪ್ರತಿಭೆಯ ಪ್ರದರ್ಶನಕ್ಕೆ ವೇದಿಕೆಯನ್ನು ಒದಗಿಸಿರುವದು ಮಾತ್ರವಲ್ಲ ಅವರ ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಪೂರಕವಾಗಿವೆ.

**ಶ್ರೀ ಬಸವರಾಜ್ ಹೆಗ್ಗನಾಯಕ**
ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಧಾರವಾಡ

## ಗ್ರಾಮ ಪಂಚಾಯತ್ ಗ್ರಂಥಾಲಯ...



- ಕೂಬಿಹಾಳ ಗ್ರಾಮದಲ್ಲಿ ಗ್ರಾಮ ಪಂಚಾಯತ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವನ್ನು ರೂಪಿಸಿದ್ದು, ಗ್ರಾಮ ಪಂಚಾಯತ್ ಜೊತೆಗೆ ಶಿಕ್ಷಣ ಫೌಂಡೇಶನ್ ಮತ್ತು ಡೆಲ್ ಸಂಸ್ಥೆಗಳು ಕೈಜೋಡಿಸಿವೆ.
- ಗ್ರಾಮ ಪಂಚಾಯತಿಯು ತನ್ನ ಸ್ವಂತ ಸಂಪನ್ಮೂಲದಿಂದ ಕಟ್ಟಡ, ಗಣಕ ಯಂತ್ರಗಳು, ಅಂತರ್ಜಾಲ ವ್ಯವಸ್ಥೆ ಮತ್ತು ನಿರಂತರ ವಿದ್ಯುತ್ ಒದಗಿಸಲಾಗಿದೆ. ಗ್ರಂಥಾಲಯದಲ್ಲಿ ಗ್ರಾಮಸ್ಥರಿಗೆ ದಿನ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳು, ಪಠ್ಯ ಪುಸ್ತಕಗಳು, ಕಥೆ, ಕಾದಂಬರಿ ಇನ್ನಿತರ ಹಲವಾರು ಪುಸ್ತಕಗಳು ಓದಲು ಲಭ್ಯವಿವೆ.
- ಶಿಕ್ಷಣ ಫೌಂಡೇಶನ್ ಹಾಗೂ ಡೆಲ್ ಸಂಸ್ಥೆಗಳು ಗ್ರಾಮ ಡಿಜಿ ವಿಕಸನವನ್ನು ಅನುಷ್ಠಾನ ಮಾಡುತ್ತಿದ್ದು, ಈ ಕಾರ್ಯಕ್ರಮದ ಅಡಿಯಲ್ಲಿ 2 ಆಂಡ್ರಾಯ್ಡ್ ಮೋಬೈಲ್‌ಗಳು, 1 ಕ್ರೋಮ್ ಬುಕ್ ಮತ್ತು 32 ಡೆಲ್ ಮಾನಿಟರ್ ಒದಗಿಸಲಾಗಿದೆ. ಗ್ರಾಮ ಡಿಜಿ ವಿಕಸನ ಶಿಕ್ಷಣಪಿಡಿಯಾ ಆಪ್‌ನ್ನು ಆಂಡ್ರಾಯ್ಡ್ ಮೋಬೈಲ್ ಮತ್ತು ಕ್ರೋಮ್ ಬುಕ್‌ಗಳಲ್ಲಿ ಅಳವಡಿಸಲಾಗಿದ್ದು, ಆಸಕ್ತರಿಗೆ ನೋಂದಣಿ ಸಂಖ್ಯೆಯನ್ನು ನೀಡಲಾಗುತ್ತಿದೆ. ಇದರಲ್ಲಿ ಡಿಜಿಟಲ್ ಕೌಶಲ್ಯಕ್ಕಾಗಿ ವೀಡಿಯೋಗಳು ಮತ್ತು ಆಡಿಯೋಗಳನ್ನು ಆರೋಹಿಸಲಾಗಿದೆ. ಗ್ರಾಮೀಣ ಪ್ರದೇಶದ ಯುವ ಸಮುದಾಯಕ್ಕೆ, ಉದ್ಯೋಗಾಕಾಂಕ್ಷಿಗಳಿಗೆ ಮತ್ತು ಸಾರ್ವಜನಿಕರಿಗೆ ತಂತ್ರಜ್ಞಾನ ಕೌಶಲ್ಯವನ್ನು ಒದಗಿಸುವ ಮೂಲಕ ತಮ್ಮ ವೃತ್ತಿ ಬದುಕನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಇದಲ್ಲದೇ, 8, 9, 10 ಮತ್ತು ಪಿಯುಸಿ 2 ವರ್ಷದ ವಿದ್ಯಾರ್ಥಿಗಳಿಗಾಗಿ ಅವರ ಪಠ್ಯಕ್ಕೆ ಪೂರಕವಾಗಿ ವಿಷಯಗಳನ್ನು ಕೂಡಾ ಅಳವಡಿಸಲಾಗಿದೆ.
- ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದಲ್ಲಿ 943 ಜನರು ಸದಸ್ಯತ್ವವನ್ನು ಹೊಂದಿದ್ದು, ಗ್ರಾಮ ಪಂಚಾಯತಿಯು ಸ್ವಂತ ಸಂಪನ್ಮೂಲವನ್ನು ಬಳಸಿಕೊಂಡು ಗ್ರಾಮಸ್ಥರನ್ನು ಅದರಲ್ಲೂ ವಿಶೇಷವಾಗಿ ಯುವಕರು ಮತ್ತು ಮಕ್ಕಳನ್ನು ಆಕರ್ಷಿಸಲು ಚೆಸ್ ಬೋರ್ಡ ಮತ್ತು ಕೇರಂ ಬೋರ್ಡಗಳು ಕೂಡ ಲಭ್ಯವಿದೆ.

**ಶ್ರೀ ಶ್ರೀಶೈಲ್ ಅಥಣಿ**
ಶಿಕ್ಷಣ ಫೌಂಡೇಶನ್, ಧಾರವಾಡ ಜಿಲ್ಲಾ ಸಂಯೋಜಕರು


ಮಾಸ ಪತ್ರಿಕೆಯ ಪ್ರಕಟಣೆ

# ಗ್ರಾಮ ಪಂಚಾಯತ ಕೂಬಿಹಾಳ

kubihal.knd.dwr@gmail.com | Dharwad Zilla Panchayat | ZPDharwad